ಅ) ಜಲಸಂವರ್ಧನೆ ಯೋಜನೆಯಂತೆ ರಾಜ್ಯದಲ್ಲಿ ಸಂಘಟಿತವಾದ ನೀರು ಬಳಕೆದಾರರ ಸಹಕಾರ ಸಂಘಗಳು ಎಷ್ಟು ಈ ಸಂಘಗಳ ಕಾರ್ಯವ್ಯಾಪ್ತಿ ಏನು;

ಆ) ಇನ್ನೂ ಮುಂದೆ ಪ್ರತಿಯೊಂದು ಕೆರೆಗೂ ಒಂದೊಂದು ಸಂಘ ರಚಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ;

ಇ) ಇದುವರೆವಿಗೂ ಈ ಯೋಜನೆಯಲ್ಲಿ ಎಷ್ಟು ಕೆರೆಗಳ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ;

ಈ) ಇದಕ್ಕಾಗಿ ಈ ವರ್ಷದ ಆಯವ್ಯಯದಲ್ಲಿ ನಿಗಧಿಪಡಿಸಿದ ಹಣವೆಷ್ಟು

ಉ) ಇದುವರೆವಿಗೂ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

ಅ) ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಇದುವರೆಗೆ 571 ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘಗಳನ್ನು ನೋಂದಾಯಿಸಿದ್ದು ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ. ಜಲಸಂವರ್ಧನೆ ಯೋಜನೆ ಪ್ರಕಾರ ಸಂಘ

ಅ) ಸಂಘ ರಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಇದುವರೆಗೆ ಕಾಮಗಾರಿ ಕೈಗೆತ್ತಿಕೊಂಡಿರುವುದಿಲ್ಲ.

ಈ) ಹತ್ತು ಕೋಟಿ ರೂ. ನಿಗದಿಪಡಿಸಲಾಗಿದೆ.

ಉ) ಕಾಮಗಾರಿಗಳು ಇನ್ನೂ ಪ್ರಾರಂಭವಾಗಿಲ್ಲವಾದ್ದರಿಂದ ವೆಚ್ಚ ಆಗಿರುವುದಿಲ್ಲ.

ಮಂಡ್ಯ ನಗರಕ್ಕೆ ಕಾವೇರಿ ೨ನೇ ಹಂತದ ಕುಡಿಯುವ ನೀರು ಪೂರೈಕೆ.

2310(2861) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮಂಡ್ಯ ನಗರದ ನಿವಾಸಿಗಳಿಗೆ ಕಾವೇರಿ ನದಿ ನೀರಿನ 2ನೇ ಹಂತದ ಕುಡಿಯುವ ನೀರು ಸರಬರಾಜಿಗಾಗಿ ಯೋಜನೆಯನ್ನು ಸರ್ಕಾರ ಚಾಲನೆ ಮಾಡಿದೆಯೇ?

2.ಹಾಗಿದ್ದಲ್ಲಿ, 2ನೇ ಹಂತದ ಯೋಜನೆ ಆರಂಭಗೊಂಡಿದ್ದರೂ ಮಂಡ್ಯ ನಗರದ ನಾಗರೀಕರಿಗೆ ಕುಡಿಯುವ ನೀರಿನ ಸಮಸ್ಯೆ ಇರುವುದಕ್ಕೆ ಕಾರಣವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

1. ಹೌದು

2. ಈ ಯೋಜನೆಯಲ್ಲಿ ಉದ್ದೇಶಿಸಲಾಗಿದ್ದ 7 ಸಂಖ್ಯೆಯ ಮೇಲ್ಟ್ಟ್ಟದ ಜಲಸಂಗ್ರಹಾಗಾರಗಳಲ್ಲಿ 4 ಜಲಸಂಗ್ರಹಾಗಾರಗಳನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ. ಕುವೆಂಪು ನಗರದ ಜಲಸಂಗ್ರಹಾಗಾರದ ಪ್ಲಾಸ್ಟರಿಂಗ್ ಮತ್ತು ಫಿನಿಷಿಂಗ್ ಕಾಮಗಾರಿ ನಡೆಯುತ್ತಿದ್ದು, ಈ ವಿಭಾಗಕ್ಕೆ ಪ್ರಮುಖ ಕೊಳವೆ ಮಾರ್ಗದಿಂದಲೇ ವಿತರಣಾ ಜಾಲಕ್ಕೆ ಸಂಪರ್ಕ ಕಲ್ಪಿಸಿ ನೀರು ಒದಗಿಸಲಾಗುತ್ತಿದೆ. ಉಳಿದೆರಡು ಜಲಸಂಗ್ರಹಾಗಾರಗಳನ್ನು ನಿರ್ಮಿಸಲು ನಗರಸಭೆ ವತಿಯಿಂದ ಸ್ಥಳ ಒದಗಿಸಬೇಕಾಗಿರುತ್ತದೆ. ಈ ಕಾರಣದಿಂದಾಗಿ ನಗರದ ಕೆಲವು ಭಾಗಗಳಲ್ಲಿ ನೀರಿನ ಸರಿಯಾದ ವಿತರಣೆ ಆಗುತ್ತಿರುವುದಿಲ್ಲ. ನಗರಕ್ಕೆ 2ನೇ ಹಂತದ ನೀರು ಸರಬರಾಜು ಯೋಜನೆ ಯಿಂದಲೇ 17.5 ದಶಲಕ್ಷ ಲೀಟರ್ ನೀರನ್ನು ಒದಗಿಸಲಾಗುತ್ತಿದ್ದು, ಪಟ್ಟಣದ ಜನಸಂಖ್ಯೆ ಸುಮಾರು 1,50,000 ಇದ್ದು ದಿನಂಪ್ರತಿ ತಲಾ 115 ಲೀಟರ್‌ಗಿಂತಲೂ ಹೆಚ್ಚಿಗೆ ನೀರನ್ನು ಒದಗಿಸಲಾಗುತ್ತಿದೆ. ಇದಲ್ಲದೆ ನಗರದ ಹಳೆ ಭಾಗಗಳಲ್ಲಿ ವಿತರಣಾ ಜಾಲವು ತುಂಬಾ ಹಳೆಯದಾಗಿರುವುದರಿಂದ ನವೀಕರಿಸಬೇಕಾಗಿರುತ್ತದೆ. ನಗರದ 11 ಜೋನ್‌ಗಳಲ್ಲಿ 3 ಜೋನ್‌ಗಳಲ್ಲಿ ವಿತರಣಾ ವ್ಯವಸ್ಥೆ ಕಲ್ಪಿಸಲಾಗಿದ್ದು, ಯೋಜನಾ ವೆಚ್ಚ ಅನುಮೋದಿತ ಅಂದಾಜಿಗಿಂತ ಹೆಚ್ಚಾದುದರಿಂದ ಉಳಿದ 8 ಜೋನ್‌ಗಳಿಗೆ ವಿತರಣಾ ವ್ಯವಸ್ಥೆಗೆ ಪ್ರತ್ಯೇಕ ಯೋಜನೆಯನ್ನು ತಯಾರಿಸಲಾಗುವುದು.

ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟಿನ ಪ್ರದೇಶದಲ್ಲಿನ ವಿತ ನೀರಾವರಿ ಕಾಮಗಾರಿಗಳು.

2311(3163) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿನ ವಿತ ನೀರಾವರಿ ಕಾಮಗಾರಿ ಚಾಲನೆಯಲ್ಲಿದಿಯೇ

ಆ) ಹಾಗಿದ್ದಲ್ಲಿ, ಈ ಕಾಮಗಾರಿ ಯಾವ ಹಂತದಲ್ಲಿದೆ

ಇ) ಈ ಕಾಮಗಾರಿಗಳು ಸಂಪೂರ್ಣಗೊಳ್ಳುವುದಕ್ಕೆ ವಿಳಂಬವಾಗಿರುವುದಕ್ಕೆ ಕಾರಣಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಮಂತ್ರಿಗಳು) :—

ಅ) 17 ವಿತ ನೀರಾವರಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಕಾಮಗಾರಿಗಳ ಪ್ರಗತಿಯ ಹಂತವನ್ನು ಅನುಬಂಧದಲ್ಲಿ ನೀಡಿದೆ.

ಇ) ಆರ್.ಸಿಸಿ. ಪೈಪ್ ಪೈಪುಗಳ ಸರಬರಾಜು ಹಾಗೂ ಭೂಸ್ವಾಧೀನದಿಂದ ಉಂಟಾದ ಅಡಚಣೆಯಿಂದ ವಿಳಂಬವಾಗಿದೆ.